ರಾಷ್ಟ್ರೀಯ ಹೆದ್ದಾರಿಗಳಲ್ಲಿ ನಡಿಯುತ್ತಿರುವ ಅಪಘಾತಗಳು

625 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ ನಂ.4ರ ವ್ಯಾಪ್ತಿಯಲ್ಲಿ ಬರುವ ಕಳ್ಳಂಬೆಳ್ಳ ಆರಕ್ಷಕ ಠಾಣೆಯ ಸರಹದ್ದಿನಲ್ಲಿ ದಿನೇದಿನೇ ಹೆಚ್ಚುತ್ತಿರುವ ಅಪಘಾತಗಳಿಂದಾಗಿ ಸಾರ್ವಜನಿಕರಲ್ಲಿ ಭೀತಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಇಲಾಖೆಯು ಅನುಸರಿಸುತ್ತಿರುವ ಕಾರ್ಯತಂತ್ರ ಮತ್ತು ವಿಧಾನಗಳೇನು?

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ) ಹೌದು.

ಆ) ಅಪಘಾತಗಳನ್ನು ತಡೆಗಟ್ಟಲು ಈ ಕೆಳಕಂಡ ಕಾರ್ಯ ವಿಧಾನಗಳನ್ನು ಕೈಗೊಳ್ಳಲಾಗಿದೆ:-

1) ರಾಷ್ಟ್ರೀಯ ಹೆದ್ದಾರಿಯಲ್ಲಿ ಗಸ್ತುಕಾರ್ಯಾಚರಣೆ ತೀವ್ರಗೊಳಿಸಲಾಗಿದೆ.
2) ಮೋಟಾರು ವಾಹನ ಕಾಯಿದೆ ಮತ್ತು ನಿಯಮಗಳನ್ನು ಪಾಲಿಸಲು ಹೆಚ್ಚಿನ ಶಕ್ತಿ ಪೂರ್ಣ ಕ್ರಮ ಕೈಗೊಳ್ಳಲಾಗಿದೆ.
3) ಸೂಚನಾ ಫಲಕಗಳನ್ನು ಹೆಚ್ಚಿನ ಅಪಘಾತ ಸ್ಥಳಗಳಲ್ಲಿ ಅಳವಡಿಸಲಾಗಿದೆ.
4) ಡಾಂಬರ ರಸ್ತೆಗಳನ್ನು ಉತ್ತಮಗೊಳಿಸಲಾಗಿದೆ ಮತ್ತು ತಿರುವುಗಳನ್ನು ನಿರೂಪಿಸುವ ಫಲಕಗಳನ್ನು ಸಹ ಜೋಡಿಸಲಾಗಿದೆ.
5) ಪ್ರಮುಖ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ವೈದ್ಯಕೀಯ ಸಂಚಾರ ಘಟಕಗಳನ್ನು ಮತ್ತು ತಾಲ್ಲೂಕು ಮತ್ತು ಜಿಲ್ಲಾಕೇಂದ್ರಗಳಲ್ಲಿ ವೈದ್ಯಕೀಯ ಕೇಂದ್ರಗಳನ್ನು (ಟ್ರಾಮಾಸೆಂಟರ್) ಸ್ಥಾಪಿಸುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ.

ದ.ಕ. ಜಿಲ್ಲೆಯಲ್ಲಿರುವ ಗೇರು ಬೀಜ ಕಾರ್ಖಾನೆ ಕುರಿತು

565 - ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ವಿಜ್ಞಾನ, ಯಂತ್ರಕಲಾ, ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಗೇರು ಬೀಜ ಕಾರ್ಖಾನೆಯ ಹೊಗೆಯಿಂದ ವಾತಾವರಣ ಕಲುಷಿತವಾಗದು ಎಂದು ಸರ್ಕಾರವು ಆದೇಶ ನೀಡಿರುವುದು ನಿಜವೇ?

ಆ) ಹೊಸ ಗೇರು ಬೀಜ ಕಾರ್ಖಾನೆಯನ್ನು ತೆರೆಯುವಾಗ ಪರಿಸರ ಮಾಲಿನ್ಯವನ್ನು ಕಾಪಾಡಲು ಸರ್ಕಾರವು ಏನಾದರೂ ಹೊಸ ನಿಯಮವನ್ನು ತಂದಿದೆಯೇ?

ಇ) ತಂದಲ್ಲಿ ಆ ನಿಯಮಗಳ ವಿವರಗಳೇನು?

ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭವಾಗುತ್ತಿರುವ ಗೇರು ಬೀಜ ಕಾರ್ಖಾನೆಗಳ ಸಂಖ್ಯೆ ಎಷ್ಟು ಹಾಗೂ ಹಳೆಕಾರ್ಖಾನೆಗಳ ಸಂಖ್ಯೆ ಎಷ್ಟು?

ಉ) ಗೇರು ಬೀಜ ಕಾರ್ಖಾನೆಯ ಮಾಲೀಕರು ಕೊಡುವ ಮೂಲ ಭೂತ ಸೌಕರ್ಯ ಸೌಲಭ್ಯಗಳೇನು?

ಡಾ|| ಹೆಚ್.ಆರ್. ರಾಜು (ವಿಜ್ಞಾನ, ಯಂತ್ರಕಲಾ, ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ರಾಜ್ಯ ಸಚಿವರು) :

ಅ) ಇಲ್ಲ

ಆ) ಇಲ್ಲ

ಇ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ಈ) ಕಾರ್ಖಾನೆ ಮತ್ತು ಬಾಯ್ಲರುಗಳ ಮುಖ್ಯ ಪರಿವೀಕ್ಷಕರ ವರದಿಯಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೂತನವಾಗಿ ಎರಡು ಕಾರ್ಖಾನೆಗಳನ್ನು ಪ್ರಾರಂಭಿಸಲಾಗಿದ್ದು, ಈಗಾಗಲೆ 67 ಹಳೆಯ ಕಾರ್ಖಾನೆಗಳು ಇರುತ್ತವೆ.

ಉ) ಕಾರ್ಖಾನೆ ಮತ್ತು ಬಾಯ್ಲರುಗಳ ಮುಖ್ಯ ಪರಿವೀಕ್ಷಕರವರಿಂದ ವರದಿಯಾದಂತೆ ಕಾರ್ಖಾನೆಗಳ ಕಾಯ್ದೆ ಮತ್ತು ಅದರಡಿಯಲ್ಲಿ ರಚಿಸುವ ನಿಯಮಗಳಂತೆ ಸೌಕರ್ಯ ಸೌಲಭ್ಯಗಳನ್ನು ಒದಗಿಸುವ ಅಗತ್ಯವಿದ್ದು, ಈ ಅಗತ್ಯಗಳನ್ನು ಉದ್ಯಮಗಳವರು ಪೂರೈಸುತ್ತಾರೆ.

ಕುಂದಾಪುರದ ಹಂಗ್ಳೂರಿನ ಗುರುರಾಜಭಟ್ಟರ ಪ್ರಕರಣ

555 - ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರದ ಹಂಗಳೂರಿನಲ್ಲಿ ಲಿಲ್ಲಿಬಾಯಿ ಹಾರ್ದಳ್ಳಿ ಮಂಡಳಿಯ ಗಣಪ ಮಡಿವಾಳ ಕೋಟೇಶ್ವರದ ಗುರುರಾಜಭಟ್ಟ ಪ್ರಕರಣಗಳನ್ನು ಸಿಒಡಿ ತನಿಖೆ ಒಳಪಡಿಸಿದ್ದು ನಿಜವೇ?

ಆ) ನಿಜವಾಗಿದ್ದಲ್ಲಿ ಈತನಕ ಸಿಒಡಿಯವರು ಕಾರ್ಯನಿರ್ವಹಿಸದಿರಲು ಕಾರಣವೇನು?

ಇ) ಒಂದು ಪಕ್ಷ ಸಿಒಡಿ ತನಿಖೆಗೆ ಒಳಪಡಿಸದಿದ್ದಲ್ಲಿ ಒಳಪಡಿಸುವ ಯೋಜನೆ ಸರ್ಕಾರದ ಮುಂದಿವೆಯೇ?

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ) ಹೌದು

ಆ) ಸರ್ಕಾರದ ಪತ್ರ ಸಂಖ್ಯೆ : ಒಇ 130 ಸಿಒಡಿ 94 ದಿನಾಂಕ 18-7-94ರರ ಪ್ರಕಾರ ಶ್ರೀಮತಿ ಲಿಲ್ಲಿಬಾಯಿ, ಗಣಪ ಮಡಿವಾಳ, ಗುರುರಾಜ ಭಟ್ಟ, ಇವರುಗಳ ಕೊಲೆ ಪ್ರಕರಣಗಳನ್ನು ದಿನಾಂಕ 9-8-94ರಂದು ಸಿಒಡಿಯಲ್ಲಿ ತನಿಖೆಗೆ ಕೈಗೆತ್ತಿಕೊಳ್ಳಲಾಗಿದೆ. ತನಿಖೆಯು ತೀವ್ರ ಪ್ರಗತಿಯಲ್ಲಿದೆ.

ಇ) ಉದ್ಭವಿಸುವುದಿಲ್ಲ.

ಪೂರಕ ಟಿಪ್ಪಣಿ

ದಿನಾಂಕ 4-9-90 ರಂದು ಬೆಳಿಗ್ಗೆ 7-45 ರಿಂದ ರಾತ್ರಿ 9.30 ಗಂಟೆಯೊಳಗಾಗಿ ಫಿರ್ಯಾದಿ ಕೆ.ಎಂ. ಶಿವಾನಂದ, ಹಂಗಳೂರು ಇವರು ತಮ್ಮ ಮನೆಯಲ್ಲಿ ಇಲ್ಲದಿರುವಾಗ ಅವರ ಉಪ ಪತ್ನಿ ಶ್ರೀಮತಿ ಲಿಲ್ಲಿಬಾಯಿ, ಇವರನ್ನು ಯಾರೋ ದುಷ್ಕರ್ಮಿಗಳು ಕೊಲೆ ಮಾಡಿ ಮೃತಳ ಕೈಯಲ್ಲಿದ್ದ ಎರಡು ಚಿನ್ನದ ಬಳೆಗಳು ಮತ್ತು ಒಂದು ಜೊತೆ ಕಿವಿಯಲ್ಲಿನ ಬಂಗಾರದ ಬೆಂಡೋಲೆಯನ್ನು ಅಪಹರಿಸಿರುತ್ತಾರೆ. ಈ ಬಗ್ಗೆ ಕುಂದಾಪುರ ಪೊಲೀಸ್ ಠಾಣೆ, ಅಪರಾಧ ಸಂಖ್ಯೆ : 137 : 90 ಕಲಂ 302, 392 ಐ.ಪಿ.ಸಿ. ಪ್ರಕಾರ ಮೊಕದ್ದಮೆ ದಾಖಲಿಸಿಕೊಂಡು ತನಿಖೆ ನಡೆಸಿ ಇದು